ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	848
ವಿಧಾನ ಪರಿಷತ್ ಸದಸ್ಯರ ಹೆಸರು	:	ಡಾ॥ ವೈ.ಎ ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವವರು	:	ಮಾನ್ಯ ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು
ಉತ್ತರಿಸಬೇಕಾದ ದಿನಾಂಕ	:	09.03.2021

ಕ್ರ ಸಂ	ಪ್ರಶ್ನೆ	ಉತ್ತರ
(ಅ)	ಸಣ್ಣ ಕೈಗಾರಿಕೆ ನಿವೇಶನಗಳನ್ವಯ ಹೊಸದಾಗಿ ಸ್ಥಾಪಿಸಲ್ಪಟ್ಟ ಉದ್ಯಮಗಳಿಗೆ ಮಂಜೂರು ಮಾಡಲಾದ ಸಹಾಯಧನದ ಮೊತ್ತ ಎಷ್ಟು; ಬಿಡುಗಡೆಯಾದ ಸಹಾಯಧನದ ವಿವರಗಳನ್ನು ನೀಡುವುದು;	ಹೊಸದಾಗಿ ಸ್ಥಾಪಿಸಲ್ಪಟ್ಟ ಸಣ್ಣ ಉದ್ಯಮಗಳಿಗೆ 2019-20 ನೇ ಸಾಲಿನಲ್ಲಿ ಮಂಜೂರು ಮಾಡಲಾದ ಸಹಾಯಧನದ ಮೊತ್ತ, ಅವುಗಳಿಗೆ 2020-21 ನೇ ಸಾಲಿನಲ್ಲಿ ಬಿಡುಗಡೆಯಾದ ಬಂಡವಾಳ ಹೂಡಿಕೆ ಉತ್ತೇಜನ ಸಹಾಯಧನದ ವಿವರಗಳು ಈ ಕೆಳಗಿನಂತಿವೆ:-

ಕ್ರ ಸಂ	ಜಿಲ್ಲೆ	ಮಂಜೂರಾದ ಸಹಾಯಧನ		ಬಿಡುಗಡೆಯಾದ ಸಹಾಯಧನ	
		ಘಟಕಗಳ ಸಂಖ್ಯೆ	ಸಹಾಯಧನ ರೂ.ಗಳಲ್ಲಿ	ಘಟಕಗಳ ಸಂಖ್ಯೆ	ಸಹಾಯಧನ ರೂ.ಗಳಲ್ಲಿ
1	ಬಾಗಲಕೋಟೆ	12	1,41,86,790	8	1,03,57,090
2	ಬೆಂಗಳೂರು ಗ್ರಾಮಾಂತರ	1	20,00,000	1	20,00,000
3	ಬೆಂಗಳೂರು ನಗರ	13	79,87,863	6	40,40,517
4	ಬೆಳಗಾವಿ	125	7,92,67,900	52	2,52,09,200
5	ಬಳ್ಳಾರಿ	7	1,31,20,400	2	52,42,400
6	ಬೀದರ್	27	5,29,77,237	11	2,95,40,482
7	ಚಾಮರಾಜ ನಗರ	2	6,32,600	1	2,57,600
8	ಚಿಕ್ಕಬಳ್ಳಾಪುರ	13	1,76,44,840	10	1,26,05,520
9	ಚಿಕ್ಕಮಗಳೂರು	11	1,10,82,000	5	33,60,000
10	ಚಿತ್ರದುರ್ಗ	19	4,09,12,100	8	1,51,06,300
11	ದಕ್ಷಿಣಕನ್ನಡ	27	2,41,81,371	13	1,23,74,377
12	ದಾವಣಗೆರೆ	33	3,11,84,000	7	79,32,000

13	ಧಾರವಾಡ	89	6,75,24,049	57	4,38,22,849
14	ಗದಗ	5	27,21,206	3	17,85,176
15	ಹಾಸನ	11	1,18,96,350	9	91,72,650
16	ಹಾವೇರಿ	4	13,84,160	4	13,84,160
17	ಕಲಬುರುಗಿ	40	7,18,59,930	9	2,11,45,250
18	ಕೊಡಗು	5	36,15,300	1	1,33,000
19	ಕೋಲಾರ	20	2,57,42,000	10	1,07,21,000
20	ಕೊಪ್ಪಳ	17	3,28,27,800	8	1,28,18,800
21	ಮಂಡ್ಯ	9	1,38,69,253	4	35,08,453
22	ಮೈಸೂರು	39	4,16,08,000	15	65,23,000
23	ರಾಯಚೂರು	14	3,15,19,388	9	2,36,83,068
24	ರಾಮನಗರ	7	1,01,43,800	2	21,00,000
25	ಶಿವಮೊಗ್ಗ	7	67,22,000	–	–
26	ತುಮಕೂರು	80	4,64,53,000	32	1,79,55,000
27	ಉಡುಪಿ	29	2,70,46,044	18	1,67,57,600
28	ಉತ್ತರಕನ್ನಡ	26	1,32,11,000	15	69,11,000
29	ವಿಜಯಪುರ	13	1,56,14,140	6	81,38,600
30	ಯಾದಗಿರಿ	7	2,04,49,000	1	3,15,000
	ಒಟ್ಟು	**712**	**73,93,83,521**	**327**	**31,49,00,092**

(ಆ)	ಕೋವಿಡ್–19 ನಿಂದಾಗಿ ಸಂಕಷ್ಟಕ್ಕೆ ಒಳಗಾದ ಎಂಎಸ್.ಎಂ.ಇ ಉದ್ದಿಮೆಗಳ ರೋಗಗ್ರಸ್ಥ ಕೈಗಾರಿಕೆಗಳ ಪುನಶ್ಚೇತನಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು; ಪ್ರಯೋಜನ ಪಡೆದ ಕೈಗಾರಿಕೆಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)	ಕೋವಿಡ್–19 ರಿಂದಾಗಿ ಸಂಕಷ್ಟದಲ್ಲಿರುವ ಸಣ್ಣ ಕೈಗಾರಿಕೆಗಳ ಪುನಶ್ಚೇತನಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ರೂಪಿಸಿರುವ ಯೋಜನೆಗಳು ಈ ಕೆಳಗಿನಂತಿವೆ:- 1. ಕೇಂದ್ರ ಸರ್ಕಾರ ಘೋಷಿಸಿರುವ "ಆತ್ಮ ನಿರ್ಭರ ಭಾರತ ಅಭಿಯಾನ" ದ ಅಡಿಯಲ್ಲಿ ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು ಮತ್ತು ಉದ್ಯಮಗಳಿಗೆ ಆರ್ಥಿಕ ನೆರವು ನೀಡುವ ಈ ಯೋಜನೆಯನ್ನು ಜಾರಿಗೆ ತಂದಿರುತ್ತದೆ. 2. ಭಾರತ ಸರ್ಕಾರವು "ಇ.ಸಿ.ಎಲ್.ಜಿ"–ಎಮರ್ಜೆನ್ಸಿ ಕ್ರೆಡಿಟ್ ಲೈನ್ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದಿದ್ದು, ಇದರನ್ವಯ ಫೆಬ್ರವರಿ–2020ರ ಅಂತ್ಯಕ್ಕೆ ಬ್ಯಾಂಕ್‌ಗಳಲ್ಲಿ ಬಾಕಿ ಇರುವ ಎಂ.ಎಸ್.ಎಂ.ಇ ಘಟಕಗಳ ಸಾಲದ ಮೊತ್ತಕ್ಕೆ ಶೇ.20 ರಷ್ಟು ಹೆಚ್ಚುವರಿ ಸಾಲವನ್ನು ಯಾವುದೇ ಹೆಚ್ಚುವರಿ ಖಾತರಿ ಇಲ್ಲದೇ ನೀಡುವ ಯೋಜನೆಯನ್ನು ಜಾರಿಗೆ ತಂದಿರುತ್ತದೆ.

ಕ್ರ ಸಂ	ಜಿಲ್ಲೆ	ಮಂಜೂರಾದ ಸಾಲ		ಬಿಡುಗಡೆಯಾದ ಸಾಲ	
		ಒಟ್ಟು ಖಾತೆಗಳು	ರೂ. ಲಕ್ಷಗಳಲ್ಲಿ	ಒಟ್ಟು ಖಾತೆಗಳು	ರೂ. ಲಕ್ಷಗಳಲ್ಲಿ
1	ಬಾಗಲಕೋಟೆ	4,268	6,639.00	4,268	6,639.00
2	ಬಳ್ಳಾರಿ	4,893	18,803.00	4,531	16,138.00
3	ಬೆಳಗಾವಿ	33,870	51,491.00	25,802	42,378.00
4	ಬೆಂಗಳೂರು ನಗರ	21,266	2,35,138.00	16,044	1,89,792.00
5	ಬೆಂಗಳೂರು ಗ್ರಾಮಾಂತರ	3,053	29,007.74	2,421	27,634.74
6	ಬೀದರ್	4,730	9,080.00	4,684	9,002.00
7	ಚಾಮರಾಜ ನಗರ	–	–	–	–
8	ಚಿಕ್ಕಮಗಳೂರು	1,032	1,346.64	1,009	1,167.34
9	ಚಿಕ್ಕಬಳ್ಳಾಪುರ	1,032	1,346.64	1,009	1,167.34
10	ಚಿತ್ರದುರ್ಗ	7,583	18,127.00	5,124	12,248.00
11	ದಕ್ಷಿಣಕನ್ನಡ	12,843	49,091.46	11,995	36,102.00
12	ದಾವಣಗೆರೆ	4,227	7,242.45	4,227	7,242.45
13	ಧಾರವಾಡ	7,700	6,622.89	7,700	6,240.72
14	ಗದಗ	2,253	3,281.35	2,138	2,693.49
15	ಹಾಸನ	6,915	11,154.00	6,915	11,154.00
16	ಹಾವೇರಿ	1,671	8,557.90	1,671	8,557.90
17	ಕಲಬುರುಗಿ	3,549	12,209.52	2,826	9,837.68
18	ಕೊಡಗು	2,669	3,000.00	2,043	2,475.00
19	ಕೋಲಾರ	1,604	3,090.25	1,402	2,724.91
20	ಕೊಪ್ಪಳ	1,968	2,932.51	1,889	2,867.21

21	ಮಂಡ್ಯ	3,478	9,294.62	3,478	9,294.62
22	ಮೈಸೂರು	7,329	12,930.00	7,046	12,750.00
23	ರಾಯಚೂರು	2,290	10,263.39	2,290	10,263.39
24	ರಾಮನಗರ	1,978	4,538.00	1,978	4,538.00
25	ಶಿವಮೊಗ್ಗ	8,405	18,328.00	8,322	17,816.00
26	ತುಮಕೂರು	1,883	8,846.72	1,883	8,846.72
27	ಉಡುಪಿ	7,765	22,981.14	6,941	22,016.97
28	ಉತ್ತರಕನ್ನಡ	9,026	8,461.93	9,026	8,461.93
29	ವಿಜಯಪುರ	–	–	–	–
30	ಯಾದಗಿರಿ	–	–	–	–
	ಒಟ್ಟು	**1,69,280**	**5,73,805.15**	**1,48,662**	**4,90,049.41**

ರಾಜ್ಯ ಸರ್ಕಾರವು ಕೊರೋನದಿಂದ ಸಂಕಷ್ಟದಲ್ಲಿರುವ ಕೈಗಾರಿಕೆಗಳ ಪುನಶ್ಚೇತನಕ್ಕೆ ಜಾರಿಗೆ ತಂದ ಯೋಜನೆಗಳ ವಿವರಗಳು ಈ ಕೆಳಗಿನಂತಿವೆ:–

1. ಇಂಧನ ಇಲಾಖೆಯು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ 2020 ರ ಏಪ್ರಿಲ್ ಮತ್ತು ಮೇ ತಿಂಗಳುಗಳ ಬೇಡಿಕೆ ಶುಲ್ಕ ಮತ್ತು ಸ್ಥಿರ ಶುಲ್ಕವನ್ನು ಮನ್ನಾ ಮಾಡಿರುತ್ತದೆ.
2. ಇಂಧನ ಇಲಾಖೆಯು ವಿದ್ಯುತ್ ಬಿಲ್‌ನ್ನು ಪ್ರಾಮಾಣಿಕವಾಗಿ ನಿಗದಿತ ಅವಧಿಯೊಳಗೆ ಪಾವತಿಸುವ ಕೈಗಾರಿಕೆಗಳಿಗೆ ರಿಯಾಯಿತಿಯನ್ನು ನೀಡಿರುತ್ತದೆ. ಹೆಚ್‌ಟಿ ಗರಿಷ್ಟ ಮಿತಿ ರೂ.1.00 ಲಕ್ಷ, ಎಲ್‌ಟಿ ಗರಿಷ್ಟ ಮಿತಿ ರೂ.10,000/–

1 ರಿಂದ 5 ದಿನದೊಳಗೆ ಪಾವತಿಸಿದಲ್ಲಿ	ಶೇ 1% ರಿಯಾಯಿತಿ
6 ರಿಂದ 15 ದಿನದೊಳಗೆ ಪಾವತಿಸಿದಲ್ಲಿ	ಶೇ 0.5% ರಿಯಾಯಿತಿ
15 ರಿಂದ 30 ದಿನದೊಳಗೆ ಪಾವತಿಸಿದಲ್ಲಿ	ಯಾವುದೇ ರಿಯಾಯಿತಿ ಇರುವುದಿಲ್ಲ

3. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು 2020 ರ ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಪಾವತಿಸದ್ದಲ್ಲಿ ಆ ಪಾವತಿಯನ್ನು ಕ್ರಮವಾಗಿ 3 ತಿಂಗಳು ಮುಂದೂಡಲಾಗಿದೆ ಮತ್ತು ಈ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ವಿಧಿಸುವುದಿಲ್ಲ.
4. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು, ಮಳಿಗೆಗಳ ಬಾಡಿಗೆ ಮತ್ತು ನೀರಿನ ಶುಲ್ಕಗಳ 2020 ರ ಏಪ್ರಿಲ್ ಮತ್ತು ಮೇ ತಿಂಗಳುಗಳ ಕಂತನ್ನು ಈ ಕೆಳಗಿನಂತೆ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಯಾವುದೇ ಬಡ್ಡಿಯನ್ನು ವಿಧಿಸಲಾಗುವುದಿಲ್ಲ.

ಏಪ್ರಿಲ್ 2020 ತಿಂಗಳ ಕಂತು	ಜೂನ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು
ಮೇ 2020 ತಿಂಗಳ ಕಂತು	ಜುಲೈ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು
ಜೂನ್ 2020 ತಿಂಗಳ ಕಂತು	ಆಗಸ್ಟ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು

ಸಿಐ 32 ಎಸ್‌ಎಸ್‌ಐ 2021

(ಸಿ.ಸಿ ಪಾಟೀಲ್)
ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು
ಸಾರ್ವಜನಿಕ ಸಂಪರ್ಕ ಸಚಿವರು